ಶ್ರೀ ಎಂ.ಎಂ. ನದಾಫ್ ಅವರ ಪರವಾಗಿ (ಶ್ರೀ ಲಮಾಣಿ ಹೆಗ್ಗಪ್ಪ ದೇಶಪ್ಪ ಪ್ರಶ್ನೆ ಕೇಳಿದರು)

ಶ್ರೀ ಲಮಾಣಿ ಹೆಗ್ಗಪ್ಪ ದೇಶಪ್ಪ.— ಘನಾನ್ಯ ಮುಖ್ಯಮಂತ್ರಿಗಳು ತಮ್ಮ ಉತ್ತರದಲ್ಲಿ ಒಬ್ಬ ಮಂತ್ರಿಗಳಿಗೆ ಒಬ್ಬರು ಆಪ್ತ ಕಾರ್ಯದರ್ಶಿ ಜಿ ಜನ ಆಪ್ತ ಸಹಾಯಕರು ಇದ್ದಾರೆಂದು ಹೇಳಿದ್ದಾರೆ. ಈಗಾಗಲೇ ಕರ್ನಾಟಕ ರಾಜ್ಯದಲ್ಲಿ ಹಣದ ಕೊರತೆ ಇದೆ. ಹಣದ ಕೊರತೆಯನ್ನು ಲಕ್ಷದಲ್ಲಿಟ್ಟುಕೊಂಡು ಸಹಾಯಕರ ಸಂಖ್ಯೆಯನ್ನು ಕಡಿಮೆ ಮಾಡಲಿಕ್ಕೆ ಸಾಧ್ಯವೆ?

ಶ್ರೀ ರಾಮಕೃಷ್ಣ ಹೆಗ್ಗಡೆ.— ಬೇರೆ ರಾಜ್ಯಗಳಿಗೆ ನಮ್ಮ ರಾಜ್ಯದಲ್ಲಿರತಕ್ಕ ವ್ಯವಸ್ಥೆಯನ್ನು ಹೋಲಿಸಿ ನೋಡಿದರೆ ಮಂತ್ರಿಗಳ ಆಪ್ತ ಕಾರ್ಯಾಲಯದಲ್ಲಿ ಸಿಬ್ಬಂದಿ ಬಹಳ ಕಡಿಮೆ ಇದೆ. ಮಂತ್ರಿಗಳು ಕೆಲಸ ಮಾಡಬೇಕೆಂದು ಮಾನ್ಯ ಸದಸ್ಯರಿಗೆ ಅಪೇಕ್ಷೆ ಇದ್ದರೆ ಕನಿಷ್ಟ ಆಷ್ಟಾದರೂ ಇರಲೇಬೇಕು.

ಶ್ರೀ ಲಮಾಣಿ ಹೆಗ್ಗಪ್ಪ ದೇಶಪ್ಪ.— ಮಂತ್ರಿಗಳ ಆಪ್ತ ಕಾರ್ಯಾಲಯದಲ್ಲಿರತಕ್ಕ ೬ ಜನರ ಖರ್ಚು ತಿಂಗಳಿಗೆ ಎಷ್ಟಾಗುತ್ತದೆ ಎಂಬುದನ್ನು ತಿಳಿಸುತ್ತೀರಾ?

ಶ್ರೀ ರಾಮಕೃಷ್ಣ ಹೆಗ್ಗಡೆ.— ಆ ವಿಷಯಗಳಿಗೆ ಮತ್ತೊಂದು ಪ್ರಶ್ನೆ ಕೇಳಿದರೆ ಉತ್ತರ ಹೇಳುತ್ತೇನೆ.

ಶಿಕಾರಿಪುರ ಆಸ್ಪತ್ರೆಗೆ ದಂತವೈದ್ಯರನ್ನು ನೇಮಕ ಮಾಡುವುದು

(೧೨೫) ಶ್ರೀ ಯಡಿಯೂರಪ್ಪ (ಶಿಕಾರಿಪುರ).— ಮಾನ್ಯ ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಶಿಕಾರಿಪುರ ಸಂಯುಕ್ತ ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿದ್ದ ದಂತ ವೈದ್ಯರನ್ನು ಸರ್ಕಾರದವರು ತರಬೇತಿಗಾಗಿ ಕಳುಹಿಸಿದ್ದು ಅವರು ವಾಪಸ್ಸು ಶಿಕಾರಿಪುರಕ್ಕೆ ಬಂದು ಕೆಲಸಕ್ಕೆ ಹಾಜರಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಸದರಿ ಆಸ್ಪತ್ರೆಯಲ್ಲಿ ದಂತ ವೈದ್ಯರಿಲ್ಲದೆ ಇರುವುದರಿಂದ ಅಲ್ಲಿಗೆ ಕೂಡಲೇ ವೈದ್ಯರನ್ನು ನೇಮಿಸಲು ಸರ್ಕಾರದವರು ಕೈಗೊಂಡ ಕ್ರಮಗಳೇನು?

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ರಾಜ್ಯ ಮಂತ್ರಿಗಳು).—

ಅ) ಹೌದು

ಆ) ೩೬ ದಂತ ವೈದ್ಯರನ್ನು ಆಯ್ಕೆ ಮಾಡಲು ಕರ್ನಾಟಕ ಲೋಕ ಸೇವಾ ಆಯೋಗವನ್ನು ಕೇಳಿದ್ದು ಆಯೋಗವು ಆಯ್ಕೆಯಾದ ವೈದ್ಯರ ಪಟ್ಟಿಯನ್ನು ಕಳಿಸಿದ ಕೂಡಲೇ ಮೇಲಿನ ಬೇಡಿಕೆಯನ್ನು ಗಮನದಲ್ಲಿಟ್ಟುಕೊಂಡು ದಂತ ವೈದ್ಯರನ್ನು ತುಂಬಲಾಗುವುದು.

ಸಾರ್ವಜನಿಕರಿಗೆ ಆಗುವ ಅನಾನುಕೂಲತೆಗಳನ್ನು ತಪ್ಪಿಸುವುದಕ್ಕಾಗಿ ಸಾಗರ ಜನರಲ್ ಆಸ್ಪತ್ರೆಯಿಂದ ಒಬ್ಬ ದಂತ ವೈದ್ಯರು ವಾರಕ್ಕೆ ಒಂದು ಬಾರಿ ಶಿಕಾರಿಪುರ ಆಸ್ಪತ್ರೆಗೆ ಹೋಗಿ ಬರುತ್ತಿರುವರು. ಈ ವ್ಯವಸ್ಥೆಯು ಖಾಯಂ ದಂತ ವೈದ್ಯರನ್ನು ನೇಮಿಸುವವರೆಗೆ ಮುಂದುವರಿಯುವುದು.

ಶ್ರೀ ಬಿ. ಎಸ್. ಯಡಿಯೂರಪ್ಪ.— ಮಾನ್ಯ ಅಧ್ಯಕ್ಷರೆ, ಶಿಕಾರಿಪುರ ತಾಲ್ಲೂಕು ಕೇಂದ್ರ ಹಿಂದಿನ ಸರ್ಕಾರ ಮತ್ತು ಈಗಿನ ಸರ್ಕಾರದ ಪ್ರಯತ್ನದಿಂದ ಜನರಲ್ ಆಸ್ಪತ್ರೆಯಾಗುತ್ತಿದೆ. ಈ ಸಂದರ್ಭದಲ್ಲಿ ಅಲ್ಲಿದ್ದಂತಹ ದಂತ ವೈದ್ಯರು ಟ್ರೈನಿಂಗ್‌ಗೆ ಹೋದವರು ವಾಪಸ್ಸು ಬರಲಿಲ್ಲ. ಲೋಕ ಸೇವಾ ಆಯೋಗದವರು ಆಯ್ಕೆಯಾದ ವೈದ್ಯರ ಪಟ್ಟಿಯನ್ನು ಕಳಿಸಿದ ಮೇಲೆ ನೇಮಕ ಮಾಡುತ್ತೇವೆಂದು ಹೇಳುತ್ತೀರಿ. ಈಗ ಅಲ್ಲಿ ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ, 'ದೇವಸ್ಥಾನದೊಳಗೆ ದೇವರಿದ್ದು ಪೂಜೆ ಮಾಡಲಿಕ್ಕೆ ಪೂಜಾರಿ ಇಲ್ಲದ ಹಾಗೆ' ಆಗಿದೆ. ದಯವಮಾಡಿ ಆದಷ್ಟು ಬೇಗ ದಂತವೈದ್ಯರನ್ನು ನೇಮಕ ಮಾಡಿದರೆ ಬಹಳ ಉಪಕಾರ ಮಾಡಿದಂತಾಗುತ್ತದೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ.— ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು.— ಪ್ರಶ್ನೆ ನಂ. ೩೪೬ (೧೨೬) ಶ್ರೀ ಎ. ಎ. ನಿಂಬಾಳ್ಕರ್, ಸದಸ್ಯರು ಗೈರು ಹಾಜರಿ.